ನನ್ನ ಓದು



ಡಿ.ಎಸ್. ಚೌಗಲೆ

# ಹೊಸ ಕಲ್ಯಾಣ ಕಟ್ಟುವ ಕನಸಿನ ಕಲ್ಯಾಣಪುರ

ವಿಕ್ರಮ ವಿಸಾಜಿ ಕನ್ನಡದ ಮಹತ್ವದ ಸಂವೇದನಾಶೀಲ ಕವಿ ಮತ್ತು ವಿಮರ್ಶಕರು. ಅವರು ಇತ್ತೀಚಿನ ವರ್ಷಗಳಲ್ಲಿ ಕೆಲವು ನಾಟಕಗಳನ್ನು ಬರೆದಿರುವರು. 'ಕಲ್ಯಾಣಪುರ' ಅವರ ಮೂರಂಕದ ನವನಾಟಕ. ಕಲ್ಯಾಣ(ಪುರ)ದ ಬಸವಣ್ಣನ ಮನೆಯಲ್ಲಿ ಇದು ತೆರೆದುಕೊಳ್ಳುತ್ತದೆ. ಕನ್ನಡ ರಂಗಭೂಮಿಯಲ್ಲಿ ಬಸವಣ್ಣ ಮತ್ತು ಶರಣರ ಚಳವಳಿ ಕುರಿತಾದ ನಾಟಕಗಳಿಗೇನು ಕೊರತೆಯಿಲ್ಲ. ಅದಕ್ಕೊಂದು ದೊಡ್ಡ ಪರಂಪರೆಯೇ ಇದೆ. ಪ್ರಸ್ತುತ ವಿಕ್ರಮ ವಿಸಾಜಿಯವರ 'ಕಲ್ಯಾಣಪುರ' ನಾಟಕವೂ ಸಹ ಈ ಪರಂಪರೆಯ ಒಂದು ಕೊಂಡಿ. ಬಸವಣ್ಣ, ಗಂಗಾಂಬಿಕೆ, ನೀಲಾಂಬಿಕೆ, ಅಕ್ಕನಾಗಮ್ಮ ಮತ್ತು ಬಾಲಸಂಗಯ್ಯ ಪಾತ್ರಗಳು.

ವಿಕ್ರಮ ವಿಸಾಜಿ ಅದೇ ಪ್ರಾಂತದವರು. ಅವರ ಹುಟ್ಟೂರು ಬೀದರ್‌ನ ಭಾಲ್ಕಿ. ಅವರು ಆರಂಭದ ಅರಿಕೆಯಲ್ಲಿ ಹೇಳಿದಂತೆ ಭಾಲ್ಕಿಯ ಚನ್ನಬಸವ ಪಟ್ಟದ್ದೇವರ ಕಾಯಕ, ಬದುಕು ಮತ್ತು ವಚನಗಳ ಪ್ರಭಾವ ಅವರ ಮೇಲಿದೆ ಎಂಬುದು. ಅವುಗಳಲ್ಲದೇ ಕಲ್ಯಾಣದ ಕಥೆಗಳು, ವಚನಸಾಹಿತ್ಯ, ಬಸವಪುರಾಣ, ಪ್ರಭುಲಿಂಗಲೀಲೆ ಅಂಥ ಕೃತಿಗಳ ಪಾಠ- ಪ್ರವಚನಗಳನ್ನು ಆಲಿಸುತ್ತ ಬೆಳೆದವರು. ಹೀಗಾಗಿ ಇವು ಈ ನಾಟಕ ರಚನೆಗೆ ಪ್ರೇರಣೆ ಮತ್ತು ಆಕರಗಳಾಗಿವೆ. ಆ ನೆಲದ ಬದುಕಿನಲ್ಲಿ ವಚನಗಳ ಘಾಟು ಹಿಂದಿನಿಂದಲೂ ಪಸರಿಸಿದೆ. ಸಹಜವಾಗಿ ವಿಸಾಜಿಯವರೊಳಗೂ ಆಂತರ್ಯದಲ್ಲಿ ಅವು ಸ್ತೋತ್ರವಾಗಿವೆ.

'ಕಲ್ಯಾಣಪುರ'ದ ಪ್ರಸಂಗಗಳು ನಡೆಯುವುದು ಬಸವಣ್ಣನವರ ಮಹಾಮನೆಯಲ್ಲಿ ಮತ್ತು ಆ ಪರಿಸರದಲ್ಲಿ. ಶರಣರ ಚಳವಳಿಯು ಪಡೆದ ತಿರುವುಗಳ ಪರಿಣಾಮಗಳು, ದುರಂತ ಸುದ್ದಿಗಳಾಗಿ ಕೇಳಿ ಬರತೊಡಗುತ್ತವೆ. ಇವು ಬಸವಣ್ಣ, ಗಂಗಾಂಬಿಕೆ, ನೀಲಾಂಬಿಕೆ ಮತ್ತು ಅಕ್ಕನಾಗಮ್ಮನವರನ್ನು ಚಿಂತೆಗೀಡು ಮಾಡುವವು.

ಬಸವಣ್ಣನವರು ರಾಜ್ಯಾಡಳಿತ ಮತ್ತು ಶರಣರ ಚಳವಳಿ- ಇವೆರಡು ಬಾಜುಗಳಲ್ಲಿ ಸಮನ್ವಯತೆ ಸಾಧಿಸಿದ್ದರು. ಒಂದೆಡೆ ಪ್ರಭುತ್ವ; ಮತ್ತೊಂದೆಡೆ ಪ್ರಜಾಪ್ರಭುತ್ವ. ಈ ಆಲೋಚನೆಗಳ ಸಮಸಮಾಜದ ಚಳವಳಿ, ಅನುಭವ ಮಂಟಪದ ಚಟುವಟಿಕೆಗಳು. ಧರ್ಮವು ಪ್ರಭುತ್ವ ವ್ಯವಸ್ಥೆಯೊಂದಿಗೆ ಅಂಟಿಕೊಂಡು ಒಂದು ಪ್ರತಿಗಾಮಿ ಪ್ರತಿರೋಧ ಒಡ್ಡುತ್ತಿರುವಾಗ ಸ್ವಾಭಾವಿಕವಾಗಿ ಸಂಘರ್ಷ, ಹಿಂಸೆ, ಕೊಲೆ, ಕದನಗಳು ಬಸವಣ್ಣನನ್ನು ಆತಂಕ, ಸಂಕಟಕ್ಕೆ